O.S. ನಂಬರಃ 687/2025
ಪಿ. ಡಬ್ಲ್ಯೂಃ 1

ದಿಃ 26-02-2026 ರಂದು ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.

ಪಾಟಿ ಸವಾಲುಃ ಪ್ರತಿವಾದಿಯ ಪರ ವಕೀಲರಾದ ಶ್ರೀ ಪಿ. ಎಸ್. ಎನ್ ಇವರಿಂದಃ

ನಾನು ಫಿರ್ಯಾದಿ ಸಂಸ್ಥೆಯಲ್ಲಿ ಅಧ್ಯಕ್ಷನೆಂದು ಕಾರ್ಯನಿರ್ವಹಿಸುತ್ತಿದ್ದೇನೆ. ಸದರಿ ಫಿರ್ಯಾದಿ ಸಂಸ್ಥೆಯಲ್ಲಿ ಶ್ರೀಮತಿ ವನಿತಾ ದೇವಾನಂದ ನಾಯಕ ಇವರು ಮುಖ್ಯ ಕಾರ್ಯನಿರ್ವಾಹಕರಾಗಿ ಕೆಲಸ ಮಾಡುತ್ತಿದ್ದಾರೆ. ಸದರಿ ಪ್ರಕರಣದ ಆರೋಪಿತನಿಗೆ ಸಾಲವನ್ನು ನೀಡುವಾಗ ನಾನು ಮತ್ತು ಶ್ರೀಮತಿ ವನಿತಾ ದೇವಾನಂದ ನಾಯಕ ಇವರು ಕ್ರಮವಾಗಿ ಅಧ್ಯಕ್ಷ ಮತ್ತು ಮುಖ್ಯ ಕಾರ್ಯನಿರ್ವಾಹಕರಾಗಿ ಕರ್ತವ್ಯ ನಿರ್ವಹಿಸುತ್ತಿದ್ದೇವು. ನಮ್ಮ ಸಂಸ್ಥೆಯಲ್ಲಿ ನಾವು ಓಡಿ ಸಾಲ, ಕಂತಿನ ಸಾಲ, ವಾಹನ ಸಾಲ, ವ್ಯವಹಾರ ಸಾಲಗಳನ್ನು ನೀಡುತ್ತೇವೆ. ಆರೋಪಿಗೆ ನಾವು ವ್ಯವಹಾರಕ್ಕೆ ಸಂಬಂಧಪಟ್ಟ ಸಾಲ ನೀಡಿರುತ್ತೇವೆ. ನಾವು ಆರೋಪಿತನ ಸಾಲದ ದಾಖಲೆಗಳಲ್ಲಿ ವ್ಯವಹಾರಿಕ ಸಾಲ ಎಂದು ನಮೂದು ಮಾಡಿರುತ್ತೇವೆ. ಯಾವುದೇ ಸಾಲವನ್ನು ಮಂಜೂರು ಮಾಡುವಾಗ ಆಡಳಿತ ಮಂಡಳಿಯ ಸಭೆ ಕರೆದು ಈ ಬಗ್ಗೆ ಠರಾವು ಮಾಡಬೇಕಾಗುತ್ತದೆ ಎಂದರೆ ಸರಿ. ಸಾಕ್ಷಿಯು ಸ್ವತಃ ಈ ಪ್ರಕರಣದಲ್ಲಿ ನಾವು ಅದನ್ನು ಪಾಲಿಸಿರುತ್ತೇವೆ ಎಂದು ನುಡಿಯುತ್ತಾರೆ. ಈ ಪ್ರರಕಣದಲ್ಲಿ ನಾವು ಆರೋಪಿಗೆ ಸಾಲ ನೀಡಲು ಯಾವ

ದಿನಾಂಕದಂದು ಠರಾವು ಮಾಡಿರುತ್ತೇವೆ ಎಂದು ನೆನಪಿರುವುದಿಲ್ಲ. ಆರೋಪಿತನು ಖಾಸಗಿ ಪ್ರೌಢ ಶಾಲೆಯಲ್ಲಿ ಮುಖೋಪಾಧ್ಯಾಯನಾಗಿ ಕೆಲಸ ಮಾಡುತ್ತಿದ್ದಾನೆ. ಆರೋಪಿಯಿಂದ ಸಾಲವನ್ನು ಪಡೆಯುವಾಗ ಭದ್ರತೆ ಪಡೆದುಕೊಂಡಿರುವುದಿಲ್ಲ, ಆತನಿಗೆ ನೌಕರಿ ಇದ್ದಿದ್ದರಿಂದ, ಆತನ ನೌಕರಿಗೆ ಸಂಬಂಧಪಟ್ಟ ದಾಖಲಾತಿಗಳನ್ನು ಪಡೆದುಕೊಂಡು ಸಾಲ ಮಂಜೂರು ಮಾಡಿರುತ್ತೇವೆ ಎಂದು ನುಡಿಯುತ್ತಾರೆ.

ಮುಂದುವರೆದ ಪಾಟೀ ಸವಾಲನ್ನು ವಿನಂತಿ ಮೇರೆಗೆ ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಗಿದೆ.)

ಓ ಹೇ ಕೇ ಸರಿ ಇದೆ.

ಜೆ.ಎಂ.ಎಫ್,ಸಿ, ಅಂಕೋಲಾ.